**P.G.R. SINDHIA,** B.E. (Civil)
STATE CHIEF COMMISSIONER
Former Minister for Health, Finance,
Home, Industries & Transport
Government of Karnataka

State Headquarters
No. 39, "Shanthigruha"
Palace Road
Bengaluru-560 001

# ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

## THE BHARAT SCOUTS & GUIDES, KARNATAKA

Ref : BSG/SHQ/ 884 | 2025-26 Date : 12/08/2025

ಮಾನ್ಯರೆ,

ವಿಷಯ:-2025-26ನೇ ಸಾಲಿನಲ್ಲಿ ಪದವಿ ಕಾಲೇಜುಗಳ ಉಪನ್ಯಾಸಕ ಮತ್ತು ಉಪನ್ಯಾಸಕಿಯರುಗಳಿಗೆ ಆಗಸ್ಟ್/ಸೆಪ್ಟೆಂಬರ್/ಅಕ್ಟೋಬರ್ 2025 ಮಾಹೆಗಳಲ್ಲಿ ಒಂದು ದಿನದ ರೋವರಿಂಗ್-ರೇಂಜರಿಂಗ್ ಪ್ರಾರಂಭಿಕ ಶಿಬಿರವನ್ನು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಸಂಘಟಿಸುವ ಬಗ್ಗೆ, ಅನುಮತಿಯ ಆದೇಶ ನೀಡಲು ಮನವಿ ಕುರಿತು.

Visvesvaraya Technological University V.C.'s Secretariat 6 18/8/25 BELAGAVI

*****

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಿಂದ ರಾಜ್ಯದ ಪ್ರತಿಯೊಂದು ಸರ್ಕಾರಿ, ಅನುದಾನಿತ, ಅನುದಾನರಹಿತ ಪದವಿ ಕಾಲೇಜುಗಳ ಉಪನ್ಯಾಸಕ ಮತ್ತು ಉಪನ್ಯಾಸಕಿಯರುಗಳಿಗೆ ರೋವರಿಂಗ್-ರೇಂಜರಿಂಗ್ ಶಿಕ್ಷಣದ ಬಗ್ಗೆ ಒಂದು ದಿನದ ಪ್ರಾರಂಭಿಕ ಶಿಬಿರವನ್ನು ಪ್ರತಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ಪದವಿ ಕಾಲೇಜುಗಳವರಿಗೆ ಆಯೋಜಿಸಿ ನಿರ್ವಹಿಸುವಲ್ಲಿ ತಮ್ಮ ಅನುಮತಿಯ ಆದೇಶವನ್ನು ನೀಡಲು ವಿನಂತಿಸುತ್ತೇನೆ. ಈ ಒಂದು ದಿನದ ಪ್ರಾರಂಭಿಕ ಶಿಬಿರದಲ್ಲಿ ರಾಜ್ಯದ ಸ್ಕೌಟಿಂಗ್-ಗೈಡಿಂಗ್‌ನಲ್ಲಿ ನುರಿತ ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿಯನ್ನು ನೀಡಲಾಗುವುದು.

ಒಂದು ದಿನದ ಪ್ರಾರಂಭಿಕ ಶಿಬಿರಕ್ಕೆ ತಮ್ಮ ವ್ಯಾಪ್ತಿಯ ಪದವಿ ಕಾಲೇಜುಗಳಲ್ಲಿ ಇದುವರೆವಗೂ ತರಬೇತಿಯನ್ನು ಹೊಂದದೆ ಇರುವಂತಹ ರೋವರ್ ವಿಭಾಗಕ್ಕೆ ಒಬ್ಬ ಪುರುಷ ಉಪನ್ಯಾಸಕರನ್ನು, ರೇಂಜರ್ ವಿಭಾಗಕ್ಕೆ ಒಬ್ಬರು ಮಹಿಳಾ ಉಪನ್ಯಾಸಕಿಯರನ್ನು ಕಡ್ಡಾಯವಾಗಿ ಕಾಲೇಜುಗಳಿಂದ ನಿಯೋಜಿಸುವುದು.

ಹಾಗೂ ಈಗಾಗಲೇ ತರಬೇತಿಯನ್ನು ಹೊಂದಿದ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ ಉಪನ್ಯಾಸಕ/ಉಪನ್ಯಾಸಕಿಯರನ್ನು ಈ ಒಂದು ದಿನದ ಪ್ರಾರಂಭಿಕ ಶಿಬಿರದಲ್ಲಿ ಭಾಗವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಪದವಿ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಕ್ತ ಆದೇಶ ನೀಡಲು ವಿನಂತಿಸುತ್ತೇನೆ.

ಭಾಗವಹಿಸುವ ಉಪನ್ಯಾಸಕರುಗಳಿಗೆ ಊಟೋಪಚಾರದ ವ್ಯವಸ್ಥೆ, ಖರ್ಚು ಸೇರಿದಂತೆ ಶಿಬಿರದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಉಪನ್ಯಾಸಕ-ಉಪನ್ಯಾಸಕಿಯರು ಪಾವತಿಸಬೇಕಾಗಿರುವ ಒಟ್ಟು ಶುಲ್ಕದ ವಿವರ ಕೆಳಕಂಡಂತಿದೆ :

18/08/25

| | |
|---|---|
| ಶಿಬಿರದ ನೊಂದಣಿ ಶುಲ್ಕ | ರೂ.156/- |
| ರೋವರ್-ರೇಂಜರ್ ಘಟಕಗಳ ನೊಂದಣಿ/ನವೀಕರಣ ಶುಲ್ಕ | ರೂ.194/- |
| ಸ್ಕೌಟ್-ಗೈಡ್ ಮಾಸಪತ್ರಿಕೆ ವಾರ್ಷಿಕ ಶುಲ್ಕ | ರೂ.200/- |
| **ಒಟ್ಟು** | **ರೂ.550/-** |

...2

Ph. (Off) : 080-22343400, 22267470
Res.: 080-26582711, 26586725
info@bsgkarnataka.org
www.bsgkarnataka.org
Mob : 09845371958
pgrsindhia@gmail.com

ಈ **ರೂ.550/–ಗಳನ್ನು** ಅಭ್ಯರ್ಥಿಗಳು ತರಬೇತಿಗೆ ಹಾಜರಾಗುವ ಸಂದರ್ಭದಲ್ಲಿ ಪಾವತಿಸಬೇಕಾಗಿರುತ್ತದೆ. ಈ ಅಭ್ಯರ್ಥಿಗಳು ಶಿಬಿರಕ್ಕೆ ಬಂದು ಹೋಗುವ ಪ್ರಯಾಣ ವೆಚ್ಚದೊಂದಿಗೆ ಮೇಲ್ಕಂಡ ರೂ.550/– ವೆಚ್ಚವನ್ನು ಪದವಿ ಕಾಲೇಜುಗಳ ರೋವರ್–ರೇಂಜರ್ ಚಾಲ್ತಿ ಅಥವಾ ಸಂಚಿತ ನಿಧಿಯಿಂದ ಭರಿಸಲು ಮತ್ತು ಆ ದಿನದ ಗೈರು ಹಾಜರಿಯನ್ನು ಅನ್ಯ ಕಾರ್ಯನಿಮಿತ್ತ ಎಂದು ಪರಿಗಣಿಸಲು ಅನುಮತಿ ನೀಡಿ ಸೂಕ್ತ ಆದೇಶ ನೀಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇನೆ.

ಸ್ಕೌಟ್ ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್.ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

**ಮಾನ್ಯ ಕುಲಪತಿಗಳು**
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಬೆಳಗಾವಿ